KAHS810026412023

# ಸಿ/ಸಿ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಸಕಲೇಶಪುರ

**ಉಪಸ್ಥಿತರು: ಶ್ರೀ. ಲಕ್ಷ್ಮೀ ನರಸಿಂಹ ಆರ್.ವಿ.** ಬಿ.ಎ.ಎಲ್., ಎಲ್.ಎಲ್.ಬಿ.,
ಸಿ/ಸಿ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್., ನ್ಯಾಯಾಲಯ, ಸಕಲೇಶಪುರ.

**ದಿನಾಂಕಃ 15ನೇ ಏಪ್ರಿಲ್ ಮಾಹೆ – 2026**

**ಸಿ.ಸಿ. ನಂಃ 1643/2023**

**ಪಿರ್ಯಾದುದಾರರು** : **ಯಸಳೂರು ಪೋಲೀಸ್ ಠಾಣೆ**
(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

**–ವಿರುದ್ಧ–**

**ಆರೋಪಿತರು** :
1. **ಶ್ರೀಮತಿ. ನೀತು ಡಾಟರ್ ಆಫ್ ಶಾಂತಪ್ಪ,**
   ವಯಸ್ಸು 37 ವರ್ಷ,
2. **ಶ್ರೀಮತಿ. ಮಣಿ ಕೋಂ ಶಾಂತಪ್ಪ,**
   ವಯಸ್ಸು 62 ವರ್ಷ,
   ಇಬ್ಬರ ವಾಸ – ಸುಂಡಳ್ಳಿ (ಚಿನ್ನಳ್ಳಿ) ಗ್ರಾಮ,
   ಯಸಳೂರು ಹೋಬಳಿ,
   ಸಕಲೇಶಪುರ ತಾಲ್ಲೂಕು,
   ಹಾಸನ ಜಿಲ್ಲೆ.

**(ಆರೋಪಿತರ ಪರ ಶ್ರೀ. ಎಲ್.ಎನ್. ವಕೀಲರು)**

| | |
|---|---|
| ಪ್ರಕರಣ ದಾಖಲಾದ ದಿನಾಂಕ | 16.11.2023 |
| ಪ್ರಕರಣದ ಸ್ವರೂಪ | ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ. 447, 354, 504, 506, 323 ಸಹವಾಚಕ ಕಲಂ. 34 ರಡಿಯಲ್ಲಿ |
| ವಿಚಾರಣೆ ಪ್ರಾರಂಭವಾದ ದಿನಾಂಕ | 07.01.2025 |
| ವಿಚಾರಣೆ ಮುಕ್ತಾಯವಾದ ದಿನಾಂಕ | 24.03.2026 |
| ತೀರ್ಪು ನೀಡಿದ ದಿನಾಂಕ | 15.04.2026 |
| ಪ್ರಕರಣದ ಒಟ್ಟು ಕಾಲಾವಧಿ | ವರ್ಷ 02 ತಿಂಗಳು 04 ದಿನಗಳು 30 |

## ತೀರ್ಪು

ಯಸಳೂರು ಪೊಲೀಸ್ ಠಾಣೆಯ ಠಾಣಾಧಿಕಾರಿಯು ಮೇಲ್ಕಂಡ ಆರೋಪಿತರ ವಿರುದ್ಧ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ. 447, 354, 504, 506, 323 ಸಹವಾಚಕ ಕಲಂ.34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಎಸಗಿರುತ್ತಾರೆಂದು ಪ್ರಸ್ತುತ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತವೆ:-**

ದಿನಾಂಕ 01.10.2023 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಯಸಳೂರು ಪೊಲೀಸ್ ಠಾಣಾ ಸರಹದ್ದಿಗೆ ಚಾಸಾ-1 ರವರಿಗೆ ಸೇರಿದ ಸರ್ವೆ ನಂಬರ್ 44/3 ರ ಜಾಗದಲ್ಲಿ ಅತಿಕ್ರಮ ಪ್ರವೇಶ ಮಾಡಿ ಆರೋಪಿತರು ಬೇಲಿ ಹಾಕಲು ಬಂದು ಕೆಲಸ ಮಾಡುತ್ತಿದ್ದು, ಆ ಸಮಯದಲ್ಲಿ ಚಾಸಾ-1 ರವರು ಆರೋಪಿತರವರನ್ನು ಕೇಳಿದಾಗ, 1ನೇ ಆರೋಪಿರವರು ಚಾಸಾ-1 ರವರ

ಮಾನಕ್ಕೆ ಧಕ್ಕೆಯನ್ನುಂಟು ಮಾಡುವ ಉದ್ದೇಶದಿಂದ ಕೈಹಿಡಿದು ಎಳೆದಾಡಿ ನೆಲಕ್ಕೆ ಕೆಡವಿ ಚಾಸಾ-1 ರವರ ಜುಟ್ಟು ಎಳೆದಾಡಿದ್ದು, ನಂತರ 2ನೇ ಆರೋಪಿರವರು ಸಹ ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ ಮತ್ತು ಚಾಸಾ-1 ರವರ ಜುಟ್ಟು ಹಿಡಿದು ಎಳೆದಾಡಿ ಕೈಯಲ್ಲಿ ತಲೆಗೆ ಮತ್ತು ಬೆನ್ನಿಗೆ ಹೊಡೆರುತ್ತಾರೆಂದು ನೀಡಿದ ದೂರಿನ ಮೇಲೆ ಪೊಲೀಸರು ಇತರೆ ತನಿಖೆ ಕೈಗೊಂಡು ಮೇಲ್ಕಂಡ ಆರೋಪಿತರ ವಿರುದ್ಧ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ. 447, 354, 504, 506, 323 ಸಹವಾಚಕ ಕಲಂ. 34 ರಡಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ಪ್ರಕರಣದ ಮೊದಲ ಹಂತದಲ್ಲಿ ಆರೋಪಿತರು ನ್ಯಾಯಾಲಯದ ಸಮಕ್ಷಮ ಹಾಜರಾಗಿ, ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದು, ಪ್ರಸ್ತುತ ಜಾಮೀನಿನ ಮೇಲೆ ಇರುತ್ತಾರೆ. ಆರೋಪಿತರಿಗೆ ದಂ.ಪ್ರ.ಸಂ.ಕಲಂ 207 ರ ಅನುಸಾರ ಅಭಿಯೋಜನೆಯು ಸಲ್ಲಿಸಿರುವ ಈ ಮೊಕದ್ದಮೆಯ ಕಾಗದ ಪತ್ರಗಳ ಪ್ರತಿಗಳನ್ನು ಪೂರೈಸಲಾಯಿತು. ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 447, 354, 504, 506, 323 ಸಹವಾಚಕ ಕಲಂ. 34 ರ ಅನುಸಾರ ದೋಷಾರೋಪಣೆಯನ್ನು ಮೇಲ್ಕಾಣಿಸಿದ ಅಪರಾಧಕ್ಕಾಗಿ ಪ್ರಾರೂಪಿಸಿ, ಆರೋಪಿತರಿಗೆ ಓದಿ ಹೇಳಲಾಯಿತು. ಆರೋಪಿತರು ತಮ್ಮ ಮೇಲೆ ಹೊರಿಸಿದ ಆರೋಪಣೆಗಳನ್ನು ಅಲ್ಲಗಳೆದು ಪ್ರಕರಣದ ವಿಚಾರಣೆಯಾಗಬೇಕೆಂದು ಬಯಸಿದ್ದು, ಅವರು ನೀಡಿದ ಉತ್ತರಗಳನ್ನು ನಮೂದಿಸಲಾಯಿತು.

**4.** ಅಭಿಯೋಜನೆಯು ಈ ಮೊಕದ್ದಮೆಯಲ್ಲಿ ತಾವು ನಿವೇದಿಸಿಕೊಂಡಿರುವ ಸಂಗತಿಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಪ್ರಾ.ಸಾ.1 ರಿಂದ ಪ್ರಾ.ಸಾ.5 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಸದರಿ ಸಾಕ್ಷಿದಾರರ ನುಡಿ ಸಾಕ್ಷ್ಯಕ್ಕೆ ಪೂರಕವಾಗಿ ನಿಶಾನೆ ಪಿ.1 ರಿಂದ ನಿಶಾನೆ ಪಿ.6 ದಾಖಲಾತಿಗಳ ಸಾಕ್ಷ್ಯವನ್ನು ಹಾಜರುಪಡಿಸಿರುತ್ತಾರೆ. ಅಭಿಯೋಜನೆಯು ತನ್ನ ಪರವಾಗಿನ ಸಾಕ್ಷ್ಯವನ್ನು ಒದಗಿಸಿ ವಿಚಾರಣೆಯನ್ನು ಮುಕ್ತಾಯಗೊಳಿಸಿರುತ್ತದೆ. ಅಭಿಯೋಜನೆಯು ವಿಚಾರಣೆಗೊಳಪಡಿಸಿದ ಸಾಕ್ಷಿದಾರರು ನೀಡಿದ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧವಾಗಿ ಪರಿಗಣಿಸಬಹುದಾದಂತಹ ಸಾಕ್ಷ್ಯವು ಕಂಡು ಬಂದ ಕಾರಣ, ಆರೋಪಿತರ ಹೇಳಿಕೆಯನ್ನು ದಂ.ಪ್ರ.ಸಂ.ಕಲಂ. 313 ರ ಅನುಸಾರ ಪಡೆದುಕೊಳ್ಳಲಾಯಿತು. ಆರೋಪಿತರ ಸಾಕ್ಷ್ಯವನ್ನು ಅಲ್ಲಗಳೆದು ತಮ್ಮ ಉತ್ತರಗಳನ್ನು ನೀಡಿರುತ್ತಾರೆ. ಅಲ್ಲದೆ ತಮ್ಮ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷ್ಯ ಇಲ್ಲವೆಂದ ಕಾರಣ ಮತ್ತು ತಮ್ಮನ್ನು ವಿಚಾರಣೆಗೊಳಪಡಿಸಿಕೊಳ್ಳುವುದಿಲ್ಲವೆಂದು ನಿವೇದಿಸಿಕೊಂಡ ಕಾರಣ ವಿಚಾರಣಾ ಹಂತವನ್ನು ಮುಕ್ತಾಯಗೊಳಿಸಿ, ಉಭಯತ್ರರ ವಾದವನ್ನು ಅಲಿಸುವ ಹಂತಕ್ಕೆ ಮುಂಡೂಡಲಾಯಿತು.

**5.** ಉಭಯತ್ರರ ವಾದ, ಪ್ರತಿವಾದವನ್ನು ಆಲಿಸಲಾಯಿತು.

**6.** ಈ ಮೇಲೆ ಹೇಳಿದ ಆರೋಪಣೆಯಿಂದ ಈ ನ್ಯಾಯಾಲಯದ ತೀರ್ಮಾರ್ನಕ್ಕೆ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ.

**ಃ ಅಂಶಗಳು ಃ**

1. ದಿನಾಂಕ 01.10.2023ರಂದು ಸಂಜೆ 4.00ಗಂಟೆ ಸಮಯದಲ್ಲಿ ಯಸಳೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಸುಂಡಳ್ಳಿ (ಚಿನ್ನಳ್ಳಿ) ಗ್ರಾಮದ ಚಾಸಾ-1 (ಪುಷ್ಪಾವತಿ) ರವರಿಗೆ ಸೇರಿದ ಸರ್ವೆ ನಂ.44/3 ರ ಜಮೀನಿಗೆ, ಆರೋಪಿತರು ಸಮಾನ ಉದ್ದೇಶವನ್ನು ಇಟ್ಟುಕೊಂಡು ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 34 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

2. ಅದೇ ದಿನ, ಸ್ಥಳ ಮತ್ತು ಸಮಯದಂದು ಮೇಲಿನ ಕೃತ್ಯವನ್ನು ಮುಂದುವರಿಸುತ್ತಾ, ಆರೋಪಿತರು ಸಮಾನ ಉದ್ದೇಶದಿಂದ ಬೇಲಿ ಹಾಕಲು ಬಂದು ಕೆಲಸ ಮಾಡುತ್ತಿದ್ದು, ಚಾಸಾ 1/ಪುಷ್ಪಾವತಿ ರವರು ಆರೋಪಿತರನ್ನು ಕೇಳಿದಾಗ, 1ನೇ ಆರೋಪಿಯು ಚಾಸಾ-1/ಪುಷ್ಪಾವತಿ ರವರ ಮಾನಕ್ಕೆ ಧಕ್ಕೆಯನ್ನುಂಟು ಮಾಡುವ ಉದ್ದೇಶದಿಂದ ಕೈ ಹಿಡಿದು ಎಳದಾಡಿ ನೆಲಕ್ಕೆ ಕೆಡವಿ ಅವರ ಜುಟ್ಟು ಹಿಡಿದು ಎಳೆದಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ

ಕಲಂ 354 ಸಹವಾಚಕ ಕಲಂ 34 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

3. ಅದೇ ದಿನ, ಸ್ಥಳ ಮತ್ತು ಸಮಯದಂದು ಮೇಲಿನ ಕೃತ್ಯವನ್ನು ಮುಂದುವರೆಸುತ್ತಾ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1/ಪುಷ್ಪಾವತಿ ರವರಿಗೆ ತಲೆಗ ಮತ್ತು ಬೆನ್ನಿಗೆ ಕೈಯಿಂದ ಹೊಡೆದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

4. ಅದೇ ದಿನ, ಸ್ಥಳ ಮತ್ತು ಸಮಯದಂದು ಮೇಲಿನ ಕೃತ್ಯವನ್ನು ಮುಂದುವರೆಸುತ್ತಾ 2ನೇ ಆರೋಪಿಯು ಸಮಾನ ಉದ್ದೇಶದಿಂದ ಸಹ ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

5. ಅದೇ ದಿನ, ಸ್ಥಳ ಮತ್ತು ಸಮಯದಂದು ಮೇಲಿನ ಕೃತ್ಯವನ್ನು ಮುಂದುವರೆಸುತ್ತಾ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ರವರ ಜುಟ್ಟು ಹಿಡಿದು ಎಳದಾಡಿ ಕೈಯಲ್ಲಿ ತಲೆಗೆ ಮತ್ತು ಬೆನ್ನಿಗೆ ಹೊಡೆದು, ಜೀವ ಬೆದರಿಕೆ ಹಾಕಿ ಭಯ ಹುಟ್ಟಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

6. ಏನು ಆದೇಶ?

**7.** ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸುತ್ತೇನೆ.

| | | | |
|---|---|---|---|
| ಅಂಶ ಸಂಖ್ಯೆ | : 1 | : | ನಕರಾತ್ಮಕವಾಗಿ |
| ಅಂಶ ಸಂಖ್ಯೆ | : 2 | : | ನಕರಾತ್ಮಕವಾಗಿ |
| ಅಂಶ ಸಂಖ್ಯೆ | : 3 | : | ನಕರಾತ್ಮಕವಾಗಿ |
| ಅಂಶ ಸಂಖ್ಯೆ | : 4 | : | ನಕರಾತ್ಮಕವಾಗಿ |
| ಅಂಶ ಸಂಖ್ಯೆ | : 5 | : | ನಕರಾತ್ಮಕವಾಗಿ |
| ಅಂಶ ಸಂಖ್ಯೆ | : 6 | : | ಅಂತಿಮ ಆದೇಶದಂತೆ,<br>ಈ ಕೆಳಕಂಡ ಕಾರಣಗಳಿಗಾಗಿ |

## ::ಕಾರಣಗಳು::

**8. ಅಂಶ ಸಂಖ್ಯೆ 1 ರಿಂದ 5 :-** ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಧಪಟ್ಟಿದ್ದು, ವಿಷಯಗಳ ಮತ್ತು ಸಾಕ್ಷ್ಯಗಳ ಪುನರಾವರ್ತನೆ ತಪ್ಪಿಸಲು ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಂಡು ಚರ್ಚಿಸಿ ಕಾರಣನೀಡಿರುತ್ತೇನೆ. ಅಭಿಯೋಜನೆಯವರು ಆರೋಪಿತರ ವಿರುದ್ಧ ಹೊರಿಸಿರುವ ಆರೋಪಗಳನ್ನು ರುಜುವಾತುಡಿಸಲು ತಮ್ಮ ಪರವಾಗಿ ಒಟ್ಟು 5 ಜನ ಸಾಕ್ಷಿದಾರರನ್ನು ಪ್ರಾಸಾ 1 ರಿಂದ 5 ರಂತೆ ವಿಚಾರಣೆಗೆ ಗುರಿಪಡಿಸಿರುತ್ತಾರೆ. ಹಾಗೆಯೇ ತಮ್ಮ ಪರವಾಗಿ ಒಟ್ಟು 6 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮೇಣ ನಿ.ಪಿ.1 ರಿಂದ 5 ಎಂಬುದಾಗಿ ಗುರುತಿಸಿಕೊಂಡಿರುತ್ತಾರೆ.

**9.** ಅಭಿಯೋಜನೆಯು ದೂರುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ-1 ರವರು ತಮ್ಮ ವಿಚಾರಣೆಯಲ್ಲಿ ಸುಂಡಹಳ್ಳಿ ಗ್ರಾಮದ ಸರ್ವೇ ನಂಬರ್ 44/3 ಮತ್ತು 44/1, 2 ಎಕರೆ 10 ಗುಂಟೆ ಜಮೀನನ್ನು ನಿತೀನ್ ಗುರುರಾಜ್ ರವರಿಗೆ ಮಾರಾಟ ಮಾಡಿದ್ದು, ಅನಂತರ ಅವರು ನೀತುರವರಿಗೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ದಿನಾಂಕ 01.10.2023 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನೀತುರವರು ಚಾಸಾ-1 ರವರು ಇಲ್ಲದ ಸಮಯದಲ್ಲಿ ಅವರ ಜಮೀನಿನಲ್ಲಿ ಬೇಲಿ ಮಾಡುತ್ತಿದ್ದರು. ಅದನ್ನು ಕೇಳಲು ಅವರು ಮತ್ತು ಚಾಸಾ-2 ರವರು ಹೋದಾಗ ಆರೋಪಿತರು ತಲೆಗೆ ಹಾರೆಯಿಂದ ಹೊಡೆದು, ಕೆಳಗೆ ಬೀಳಿಸಿರುತ್ತಾರೆ. ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದ್ದು, ಆ ಪ್ರಕಾರ ದಿನಾಂಕ 02.10.2023 ರಂದು ಪೊಲೀಸರಿಗೆ ದೂರು ನೀಡಿರುವುದಾಗಿ ಸಾಕ್ಷ್ಯ ನೀಡಿರುತ್ತಾರೆ. ದಿನಾಂಕ 03.10.2023 ರಂದು ಪೊಲೀಸರು ಘಟನಾ ಸ್ಥಳದಲ್ಲಿ ಬೆಳಿಗ್ಗೆ 10 ರಿಂದ 11 ರವರೆಗೆ

ಪಂಚನಾಮೆ ಮಾಡಿರುತ್ತಾರೆ. ಅನಂತರ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

10. ಆರೋಪಿತರ ಪರ ಪಾಟೀ ಸವಾಲಿನಲ್ಲಿ ಸರ್ವೇ ನಂ. 44/1, 2 ಎಕರೆ 10 ಗುಂಟೆ ಆಸ್ತಿಯನ್ನು ನಿತೀನ್ ಗುರುರಾಜ್‌ರವರಿಗೆ ಮಾರಾಟ ಮಾಡಿದ್ದು, ಸದರಿಯವರು ಸದರಿ ಜಮೀನನ್ನು 1ನೇ ಆರೋಪಿಗೆ ಮಾರಾಟ ಮಾಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಅವರ ಜಮೀನಿಗೂ ಮತ್ತು 1ನೇ ಆರೋಪಿಯ ಜಮೀನಿಗೂ ಅಕ್ಕ ಪಕ್ಕ ಇರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ–1 ರವರು ಬೇಲಿಯನ್ನು ಹಾಕುತ್ತಿದ್ದಾಗ ಅದನ್ನು ಕಿತ್ತು ಹಾಕಿ ಹೊಸ ಬೇಲಿಯನ್ನು ಹಾಕುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಸಮಯದಲ್ಲಿ ಚಾಸಾ–3 ಮತ್ತು ಚಾಸಾ–4 ರವರು ಹಾಜರಿದ್ದು, ಆರೋಪಿತರು ಹಾರೆಯಿಂದ ಫ್ರಾಸಾ–1 ರವರ ತಲೆಗೆ ಮತ್ತು ಕೈಗೆ ಹೊಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಗಲಾಟೆಯು ದಿನಂಕ 01.10.2023 ಸಂಜೆ 4 ರಿಂದ 6 ಗಂಟೆಯವರೆಗೆ ಆಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಅದೇ ತಾರೀಖಿನಂದು ಸಂಜೆ 6.00 ಗಂಟೆಗೆ ಠಾಣೆ ಹೋಗಿದ್ದು ಪೊಲೀಸರು ದೂರು ಪಡೆದಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಮರುದಿನ ಬೆಳಿಗ್ಗೆ 10.00 ಗಂಟೆಗೆ ಶನಿವಾರಸಂತೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ದೂರಿನಲ್ಲಿ 1ನೇ ಆರೋಪಿ ಹಾರೆ ಮತ್ತು ದೊಣ್ಣೆಯಿಂದ ಹೊಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**11.** ಮುಂದುವರೆದು, ಆರೋಪಿತರು ಫ್ರಾಸಾ–1 ರವರ ಜಾಗದಲ್ಲಿ ಒಟ್ಟು 1 ಎಕರೆಯಷ್ಟು ಬೇಲಿ ಹಾಕಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಪೊಲೀಸರು ದಿನಾಂಕ

03.10.2023 ರಂದು ಬೆಳಿಗ್ಗೆ 10.00 ಗಂಟೆಗೆ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನಿಪಿ–3 ಹೇಳಿಕೆಯಲ್ಲಿ ದಿನಾಂಕ 30.09.2023 ರಂದು ಗಲಾಟೆ ಯಾಗಿರುತ್ತದೆಂದು ಬರೆಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇತರ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

**12.** ಅಭಿಯೋಜನೆಯು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–2 ಸರೋಜರವರನ್ನು ಫ್ರಾ.ಸಾ.2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಫ್ರಾಸಾ–2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 01.10.2023 ರಂದು ಸಂಜೆ 4 ಗಂಟೆ ಸಮಯದಲ್ಲಿ ಸುಂಡಳ್ಳಿ ಗ್ರಾಮದ ಚೆನ್ನಳ್ಳಿಯಲ್ಲಿ ಗದ್ದೆಯ ಬಳಿ ಕೆಲಸ ಮಾಡುತ್ತಿರುವಾಗ, ಆರೋಪಿತರು ಬಂದು ಹೊಡೆದಿರುತ್ತಾರೆ. ಅವರು ನಿತಿನ್‌ರವರಿಗೆ ಜಮೀನು ಮಾರಾಟ ಮಾಡಿದ್ದು, ಅನಂತರ ಆರೋಪಿತರು ಜಮೀನು ಖರೀದಿ ಮಾಡಿ ತೊಂದರೆ ನೀಡಿರುತ್ತಾರೆ. ಚಾಸಾ–1 ರವರನ್ನು ತಲೆಗೆ ಹೊಡೆದು ಬೀಳಿಸಿರುತ್ತಾರೆ, ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆ ದಿನ ಪೊಲೀಸರು ಪಿರ್ಯಾದಿ ಪಡೆದಿರುವುದಿಲ್ಲ. ಮರುದಿನ ಪಿರ್ಯಾದಿ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**13**. ಆರೋಪಿತರ ಪರ ಪಾಟೀ ಸವಾಲಿನಲ್ಲಿ ಗಲಾಟೆ ಸಮಯದಲ್ಲಿ 5–6 ಜನ ಸೇರಿದ್ದರು. ಗಲಾಟೆ ಜಾಗಕ್ಕೂ ಮತ್ತು ಅವರ ಮನೆಗೂ ಒಂದು ಪರ್ಲಾಂಗ್ ದೂರ ಇರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಚಾಸಾ–1 ರವರಿಗೆ ಹಾರೆಯಿಂದ ತಲೆಗೆ ಮತ್ತು ಕೈಗೆ ಹೊಡೆದಿದ್ದು, ಅವರ ಕೈ ಮತ್ತು ಬಟ್ಟೆಗೆ ರಕ್ತ ಆಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಗಲಾಟೆಯು ಒಂದು ಗಂಟೆ

ಕಾಲ ಆಗಿದ್ದು ಚಾಸಾ–1 ರವರಿಗೆ ಪ್ರಜ್ಞೆ ತಪ್ಪಿದ್ದು ಅದೇ ದಿನ ಸಂಜೆ 6.00 ಗಂಟೆಗೆ ಶನಿವಾರ ಸಂತೆ ಆಸ್ಪತ್ರೆಗೆ ಕರೆದುಕೊಂಡು ಹೋದಾಗ, ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಗಲಾಟೆಯಾದ ದಿನವೇ ಪೊಲೀಸರಿಗೆ ಸಂಜೆ 6.00 ಗಂಟೆಗೆ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಗಲಾಟೆಯಾದ 3 ದಿನ ನಂತರ ದೂರು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. 2ನೇ ಆರೋಪಿ ಅವರ ಕೈಗೆ ಹೊಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇತರ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

**14.** ಅಭಿಯೋಜನೆಯು ಪಂಚನಾಮೆ ಸಾಕ್ಷಿದಾರರಾದ ಚಾಸಾ–3 ಮತ್ತು ಚಾಸಾ–4 ರವರನ್ನು ಕ್ರಮೇಣವಾಗಿ ಫ್ರಾಸಾ–3 ಮತ್ತು ಫ್ರಾಸಾ–4 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಸದರಿಯವರು ತಮ್ಮ ವಿಚಾರಣೆಯಲ್ಲಿ ಸುಮಾರು 2 ವರ್ಷದ ಹಿಂದೆ ಚಿನ್ನಳ್ಳಿ ದೇವಸ್ಥಾನದ ಬಳಿ ಮತ್ತು ಸುಂಡಳ್ಳಿ ಗದ್ದೆಯ ಬಳಿ ಪೊಲೀಸರು ಒಂದು ದಾಖಲಾತಿಗೆ ಸಹಿ ಪಡೆದಿದ್ದು ಅದನ್ನು ಹೊರತುಪಡಿಸಿ ಬೇರೆ ಏನೂ ಗೊತ್ತಿಲ್ಲ. ತಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನೆಯು ಫ್ರಾಸಾ–3 ಮತ್ತು ಫ್ರಾಸಾ–4 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸವಿಸ್ತಾರವಾದ ಪಾಟೀ ಸವಾಲನ್ನು ಮಾಡಿದ್ದರು ಸಹ, ಅಭಿಯೋಜನೆಗೆ ಯಾವುದೇ ಲಾಭದಾಯಕವಾದ ಅಂಶಗಳು ಕಂಡು ಬಂದಿರುವುದಿಲ್ಲ.

**15.** ಅಭಿಯೋಜನೆಯು ತನಿಖಾಧಿಕಾರಿಯಾದ ಚಾಸಾ.5 ರವರನ್ನು ಫ್ರಾಸಾ–5 ಎಂದು ವಿಚಾರಣೆಗೆ ಒಳಪಡಿಸಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 02.10.2023 ರಂದು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 4ಕ್ಕೆ ಚಾಸಾ–1 ರವರು ಠಾಣೆಗೆ ಬಂದು ನೀಡಿದ ಲಿಖಿತ ದೂರನ್ನು

ಸ್ವೀಕರಿಸಿ ಠಾಣಾ ಮೊಕದಮ್ಮೆ ನಂ.95/2023 ರಂತೆ ಪ್ರಕರಣ ದಾಖಲು ಮಾಡಿರುತ್ತಾರೆ. ದಿನಾಂಕ 03.10.2023 ರಂದು ಚಾಸಾ-1 ರವರು ತೋರಿಸಿದಂತೆ ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ರವರೆಗೆ ಘಟನಾ ಸ್ಥಳದ ಪಂಚನಾಮೆ ಮಾಡಿರುತ್ತಾರೆ. ದಿನಾಂಕ 12.10.2023 ರಂದು ಚಾಸಾ-1 ರವರ ಹೇಳಿಕೆ ದಾಖಲು ಮಾಡಲು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿರುತ್ತಾರೆ. ದಿನಾಂಕ 18.10.2023 ರಂದು ಚಾಸಾ-1 ರವರ ಕಲಂ.164 ರಡಿಯಲ್ಲಿನ ಹೇಳಿಕೆಯನ್ನು ಸ್ವೀಕರಿಸಿರುತ್ತಾರೆ. ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ದಿನಾಂಕ 27.10.2023 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

**16.** ತಮ್ಮ ಪಾಟೀ ಸವಾಲಿನಲ್ಲಿ ಚಾಸಾ-1 ರವರು ಮಾತ್ರ ದೂರು ನೀಡಲು ಠಾಣೆಗೆ ಬಂದಿದ್ದರು. ದೂರು ನೀಡುವ ಮೊದಲು ಚಾಸಾ-1 ರವರು ತಮ್ಮನ್ನು ಭೇಟಿಯಾಗಿರುವುದಿಲ್ಲ. ಗಲಾಟೆಯಾದ ಸಮಯಕ್ಕೆ ದೂರು ನೀಡುವ ಸಮಯಕ್ಕೂ 24 ಗಂಟೆ ತಡವಾಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಘಟನಾ ಸ್ಥಳದಲ್ಲಿ ಪೋಟೋವನ್ನು ತನ್ನ ಸಹಾಯಕ ಹರ್ಷರವರು ತೆಗೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇತರ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

**17.** ಸಾಕ್ಷಿದಾರರ ವಿಚಾರಣೆ ಮತ್ತು ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ಫ್ರಾಸಾ-1 ರವರು ತಮ್ಮ ವಿಚಾರಣೆಯಲ್ಲಿ ಸರ್ವೇ 44/1 ರ ಆಸ್ತಿಯನ್ನು ನಿತೀನ್ ಗುರುರಾಜ್ ರವರು ಮಾರಾಟ ಮಾಡಿದ್ದು ಅನಂತರ ಸದರಿರವರು 1ನೇ ಆರೋಪಿಗೆ ಮಾರಾಟ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಗಲಾಟೆಯು ದಿನಾಂಕ 01.10.2023 ರಂದು ಸಂಜೆ

4.00 ಗಂಟೆಗೆ ಆಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ನಿಪಿ–1 ದೂರನ್ನು ದಿನಾಂಕ 02.10.2023 ರಂದು ಸಂಜೆ 4.00 ಗಂಟೆಗೆ ನೀಡಿದ್ದು ಯಾವ ಕಾರಣದಿಂದ ತಡವಾಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ–1 ಮತ್ತು ಫ್ರಾಸಾ–2 ರವರು ಗಲಾಟೆಯಾದ ದಿನವೇ ಶನಿವಾರಸಂತೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಫ್ರಾಸಾ–1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲಾತಿಗಳು ಕಂಡು ಬಂದಿರುವುದಿಲ್ಲ. ಫ್ರಾಸಾ–1 ರವರು ತಮಗೆ ತಲೆಗೆ ರಕ್ತಗಾಯ ಆಗಿಲ್ಲ ಮತ್ತು ಬಟ್ಟೆಗೆ ರಕ್ತ ಕಲೆ ಆಗಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಫ್ರಾಸಾ–2 ರವರು ಫ್ರಾಸಾ–1 ರವರಿಗೆ ತಲೆಗೆ, ಕೈಗೆ ರಕ್ತಗಾಯವಾಗಿದ್ದು ಬಟ್ಟೆಗೆ ರಕ್ತ ಕಲೆ ಯಾಗಿತ್ತು ಮತ್ತು ಫ್ರಾಸಾ–1 ರವರು ಪ್ರಜ್ಞೆ ತಪ್ಪಿ ಬಿದ್ದಿದ್ದು ಶನಿವಾರಸಂತೆ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಫ್ರಾಸಾ–1 ರವರು ತಮ್ಮ ದೂರಿನಲ್ಲಾಗಲಿ, ಹೇಳಿಕೆಯಲ್ಲಾಗಲಿ ಅಥವಾ ವಿಚಾರಣೆಯಲ್ಲಾಗಲಿ ಸದರಿ ವಿಚಾರವನ್ನು ತಿಳಿಸಿರುವುದಿಲ್ಲ.

**18.** ಮುಂದುವರೆದು ಫ್ರಾಸಾ–1 ರವರು 1ನೇ ಆರೋಪಿ ತನ್ನ ಜುಟ್ಟನ್ನು ಹಿಡಿದು ಎಳೆದಾಡಿ ಅವಮಾನ ಮಾಡಿರುವುದಾಗಿ ದೂರಿನಲ್ಲಿ ತಿಳಿಸಿರುತ್ತಾರೆ. ಅದರೆ ಸದರಿ ವಿಚಾರವನ್ನು ತಮ್ಮ ವಿಚಾರಣೆಯಲ್ಲಿ ತಿಳಿಸಿರುವುದಿಲ್ಲ. ಫ್ರಾಸಾ–1 ಮತ್ತು ಫ್ರಾಸಾ–2 ರವರು ಗಲಾಟೆಯಾದ ಕಾಲಕ್ಕೆ ಫ್ರಾಸಾ–3 ಮತ್ತು ಫ್ರಾಸಾ–4 ರವರು ಹಾಜಾರಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಸದರಿಯವರು ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ ಮತ್ತು ತಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ–1 ಮತ್ತು ಫ್ರಾಸಾ–2 ರವರು ಆರೋಪಿತರು ಫ್ರಾಸಾ–1 ರವರಿಗೆ ಹಾರೆಯಿಂದ ಹೊಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಆದರೆ ಈ ಪ್ರಕರಣದಲ್ಲಿ ಯಾವುದೇ ಹಾರೆಯನ್ನು ಜಪ್ತು ಪಡಿಸಿರುವುದಿಲ್ಲ. ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ ಆರೋಪಿತರ ವಿರುದ್ಧ ಹೊರಿಸಲಾದ ಆಪಾದನೆಗಳನ್ನು ಸಾಬೀತು ಪಡಿಸಲು ಸಾಧ್ಯವಾಗಿರುವುದಿಲ್ಲ ಮತ್ತು ಸಂಶಯದ ಲಾಭವನ್ನು ಆರೋಪಿತರಿಗೆ ನೀಡುವುದಾಗಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಸದರಿ ***ಅಂಶ ಸಂಖ್ಯೆ 1 ರಿಂದ 5ಕ್ಕೆ ನಕಾರಾತ್ಮಕವಾಗಿ*** ಉತ್ತರಿಸಿದೆ.

**19.** **ಅಂಶ ಸಂಖ್ಯೆ 6:-** ಈ ಮೇಲ್ಕಂಡ ವಿವಾದಾಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ, ಅಂತಿಮ ಆದೇಶ ಈ ಕೆಳಕಂಡಂತೆ.

::**ಆದೇಶ**::

ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿತರ ವಿರುದ್ಧ ಭಾರತೀಯ ದಂ.ಸಂ.ಕಲಂ. 447, 354, 504, 506, 323 ಸಹವಾಚಕ ಕಲಂ. 34 ಅಡಿಯಲ್ಲಿ ಹೊರಿಸಲಾದಂತಹ ಆರೋಪದಿಂದ ಆರೋಪಿತರನ್ನು ದೋಷಮುಕ್ತಿಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಮತ್ತು ಜಾಮೀನುದಾರರ ಮುಚ್ಚಳಿಕೆ ಪತ್ರಗಳನ್ನು ಅಫೀಲು ಅವಧಿ ಮುಗಿದ ನಂತರ ರದ್ದುಪಡಿಸಲು ಆದೇಶಿಸಿದೆ.

ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ) ಅಡಿಯಲ್ಲಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು 6 ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

*(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ **15ನೇ ಏಪ್ರಿಲ್ 2026** ರಂದು ಘೋಷಿಸಿದ್ದೇನೆ)*

**(ಶ್ರೀ ಲಕ್ಷ್ಮೀ ನರಸಿಂಹ ಆರ್.ವಿ,)**
ಸಿ/ಸಿ **1**ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಸಕಲೇಶಪುರ.

**::ಅನುಬಂಧ::**

**ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:-**

| | | |
|---|---|---|
| ಫ್ರಾಸಾ-1 | : | ಶ್ರೀಮತಿ. ಪುಷ್ಪಾವತಿ |
| ಫ್ರಾಸಾ-2 | : | ಶ್ರೀಮತಿ. ಸರೋಜ |
| ಫ್ರಾಸಾ-3 | : | ಶ್ರೀ. ಜಯಪ್ಪ |
| ಫ್ರಾಸಾ-4 | : | ಶ್ರೀ. ಸುರೇಶ |
| ಫ್ರಾಸಾ-5 | : | ಶ್ರೀ. ಜಗದೀಶ ಎ.ವಿ. |

**ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:-**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಫ್ರಾಸಾ-1 ರವರ ಸಹಿ |
| ನಿಪಿ-1(ಬಿ) | : | ಫ್ರಾಸಾ-2 ರವರ ಸಹಿ |
| ನಿಪಿ-2 | : | ಪಂಚನಾಮೆ |
| ನಿಪಿ-2(ಎ) | : | ಫ್ರಾಸಾ-1 ರವರ ಸಹಿ |
| ನಿಪಿ-2(ಬಿ) | : | ಫ್ರಾಸಾ-3 ರವರ ಸಹಿ |
| ನಿಪಿ-2(ಸಿ) | : | ಫ್ರಾಸಾ-4 ರವರ ಸಹಿ |

| | | |
|---|---|---|
| ನಿಪಿ-2(ಡಿ) | : | ಫ್ರಾಸಾ-5 ರವರ ಸಹಿ |
| ನಿಪಿ-3 | : | ಫ್ರಾಸಾ-1 ರವರ ಹೇಳಿಕೆ |
| ನಿಪಿ-4 | : | ಪ್ರ.ವ.ವರದಿ |
| ನಿಪಿ-4(ಎ) | : | ಫ್ರಾಸಾ-5 ರವರ ಸಹಿ |
| ನಿಪಿ-5 | : | ಪೋಟೋ |
| ನಿಪಿ-6 | : | ಸಿಡಿ |
| ನಿಪಿ-6(ಎ) | : | ಭಾರತೀಯ ಸಾಕ್ಷ್ಯಾ ಅಧಿನಿಯಮ ಕಲಂ.65(ಬಿ) ರೀತ್ಯಾ ದೃಢೀಕರಣ ಪತ್ರ |

**ಆರೋಪಿತರ ಪರ ಸಾಕ್ಷಿದಾರರುಗಳ ಪಟ್ಟಿ:-**

–ಇಲ್ಲ–

**ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:-**

–ಇಲ್ಲ–

**ಅಭಿಯೋಜನೆಯ ಪರ ಗುರುತಿಸಲ್ಪಟ್ಟ ಮುದ್ದೆ ಮಾಲುಗಳ ಪಟ್ಟಿ:-**

–ಇಲ್ಲ–

**ಸಿ/ಸಿ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಸಕಲೇಶಪುರ.**